## ರಾಜ್ಯ ಮಟ್ಟದ ಸುಗ್ರಾಮ

ಪ್ರತಿ ಆಯ್ದ ಜಿಲ್ಲೆಯ (ಆಯ್ದ ಎಲ್ಲಾ ತಾಲ್ಲೂಕುಗಳ ವತಿಯಿಂದ) ಒಬ್ಬ ಅಧ್ಯಕ್ಷರು ರಾಜ್ಯ ಮಟ್ಟದ ಸುಗ್ರಾಮದ ಸಂಚಾಲನಾ ಸಮಿತಿಯ ಸದಸ್ಯರಾಗುತ್ತಾರೆ. ಈ ಸದಸ್ಯರ ಆಯ್ಕೆಯು ತಾಲ್ಲೂಕು ಮಟ್ಟದ ಅಧ್ಯಕ್ಷರವತಿಯಿಂದ ನಡೆಯುತ್ತದೆ.

ಎಲ್ಲಾ ಆಯ್ದ ಜಿಲ್ಲೆಗಳಿಂದ ಬಂದಂತಹ ಪ್ರತಿನಿಧಿಗಳು ರಾಜ್ಯ ಮಟ್ಟದ ಸಂಚಾಲನಾ ಸಮಿತಿಯ ಸದಸ್ಯರಾಗಿರುತ್ತಾರೆ, ಮತ್ತು ಇವರಲ್ಲಿ 7 ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗುವುದು. ಈ ಪದಾಧಿಕಾರಿಗಳು ಅಧ್ಯಕ್ಷರು, ಉಪಾಧ್ಯಕ್ಷರು ಉತ್ತರ ಮತ್ತು ದಕ್ಷಿಣ ವಲಯ, ಕಾರ್ಯದರ್ಶಿ, ಸಹಕಾರ್ಯದರ್ಶಿ ಉತ್ತರ ಮತ್ತು ದಕ್ಷಿಣ ವಲಯ, ಖಜಾಂಚಿಯನ್ನು ಒಳಗೊಂಡಿರುತ್ತದೆ.

## ಪದಾಧಿಕಾರಿಗಳ ಜವಾಬ್ದಾರಿ ಮತ್ತು ಕರ್ತವ್ಯಗಳು:

ಪ್ರತಿ ತಾಲ್ಲೂಕು ಮತ್ತು ರಾಜ್ಯ ಅಧ್ಯಕ್ಷರು ಕಾರ್ಯದರ್ಶಿಯವರೊಡಗೂಡಿ ಸುಗ್ರಾಮದ ಚಟುವಟಿಕೆಗಳನ್ನು ಮುಂದುವರೆಸತಕ್ಕದ್ದು.

ಎಲ್ಲಾ ಸುಗ್ರಾಮದ ಸದಸ್ಯರೂ ಕ್ರಿಯಾಶೀಲ ಮತ್ತು ಪರಿಣಾಮಕಾರಿ ನಾಯಕರಾಗಲು ಉತ್ತೇಜನ ನೀಡುವುದು ಮತ್ತು ಪ್ರತಿ ತಾಲ್ಲೂಕಿನ ಸಮಸ್ಯೆಗಳಿಗೆ ಬೆಂಬಲ ನೀಡುವುದು ಮತ್ತು ಮಾಜಿ ಚುನಾಯಿತ ಮಹಿಳಾ ಸದಸ್ಯರ ಸಲಹೆ/ಬೆಂಬಲ ಪಡೆದು, ಎಲ್ಲಾ ಸದಸ್ಯರು ಸಂಘಟಿತರಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದು.

ಇದಲ್ಲದೆ, ಪ್ರತಿ ಸದಸ್ಯರ ಕಾರ್ಯವೈಖರಿಯನ್ನು ಖಾತ್ರಿಪಡಿಸಿಕೊಳ್ಳುವುದು. ರಾಜ್ಯ ಸರ್ಕಾರದ ಯಾವುದೇ ಹೊಸ ನೀತಿ, ನಿಯಮ ಮತ್ತು ಯೋಜನೆಗಳು ಪಂಚಾಯತಿಗಳ ಮೇಲಾಗುವ ಪರಿಣಾಮದ ಬಗ್ಗೆ ಜಾಗೃತಿ ಮೂಡಿಸುವುದು. ಹಾಗೆಯೇ, ತಮಗಾದ ಕಲಿಕೆಯನ್ನು ಮುಂದೆ (ಮುಂದಿನ ಐದು ವರ್ಷದ ಅವಧಿಗೆ) ಆಯ್ಕೆ ಆಗುವಂತಹ ಸದಸ್ಯರ ಸಾಮರ್ಥ್ಯಾಭಿವೃದ್ಧಿ ಮಾಡುವ ನಿಟ್ಟಿನಲ್ಲಿ ತೊಡಗಿಸಿಕೊಳ್ಳುವುದು.

**ಸುಗ್ರಾಮವು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆಯನ್ವಯ 1960 – ಸಂಖ್ಯೆSOR BLU DR 1227/ 09/10 ದಿನಾಂಕ 19.03.2010 ರಂದು ನೋಂದಾಯಿಸಲಾಗಿದೆ**

**ಹೆಚ್ಚಿನ ವಿವರಗಳಿಗೆ ಸುಗ್ರಾಮವನ್ನು ಸಂಪರ್ಕಿಸಿ:**
ಸುಗ್ರಾಮ–ನಂ 4, ಬರ್ಲಿ ಸ್ಟ್ರೀಟ್ ಕ್ರಾಸ್, ಎರಡನೇ ಮಹಡಿ, ಗಣೇಶ್ ಪೂಜಾ ಹೌಸ್ ಮುಂಭಾಗ
ಲಾಂಗ್‌ಫರ್ಡ್ ಟೌನ್, ಶಾಂತಿನಗರ, ಬೆಂಗಳೂರು – 560025
ಈ ಮೇಲ್–padananth.sugrama@gmail.com / www.sugrama.org



# SUGRAMA
# ಸುಗ್ರಾಮ

## ಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಘ–ಕರ್ನಾಟಕ



**ಒಟ್ಟಾಗಿ ಬರುವುದು ಪ್ರಾರಂಭ**
**ಒಟ್ಟಾಗಿ ಕಲಿಯುವುದು ಒಂದು ಪ್ರತಿಕ್ರಿಯೆ**
**ಒಟ್ಟಾಗಿ ಒಗಟ್ಟಾಗಿ ಕೆಲಸ ಮಾಡುವುದು**
**ಪರಿವರ್ತನೆ ಮತ್ತು ಯಶಸ್ಸು**



## ದೃಷ್ಟಿ

ಲಿಂಗ ಸಮಾನತೆ ಮತ್ತು ನ್ಯಾಯಯುತ ಸಮಾಜದಲ್ಲಿ ಸಶಕ್ತ ಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿನಿಧಿಗಳು

## ಧ್ಯೇಯ

ಗ್ರಾಮ ಪಂಚಾಯತ್‌ಗಳ ಸಮಗ್ರ ಅಭಿವೃದ್ಧಿಗೆ ಒಗ್ಗಟ್ಟಿನಿಂದ ವಕಾಲತ್ ನಡೆಸುವುದು ಮತ್ತು ಉತ್ತಮ ಆಡಳಿತವನ್ನು ಆಚರಣೆಗೆ ತರಲು ಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿನಿಧಿಗಳನ್ನು ಸಶಕ್ತಗೊಳಿಸುವುದು.

## ಉದ್ದೇಶ

- ಚುನಾಯಿತ ಮಹಿಳಾ ಪ್ರತಿನಿಧಿಗಳು ಗ್ರಾಮ ಪಂಚಾಯತ್‌ನಲ್ಲಿ ಕ್ರಿಯಾಶೀಲ ಮತ್ತು ಪರಿಣಾಮಕಾರಿ ನಾಯಕರಾಗಲು ಉತ್ತೇಜನ ನೀಡುವುದು
- ಚುನಾಯಿತ ಮಹಿಳಾ ಪ್ರತಿನಿಧಿಗಳು ಗ್ರಾಮಪಂಚಾಯತ್‌ಗೆ ಸಂಬಂಧಿಸಿದ ಸವಾಲುಗಳನ್ನು ಎದುರಿಸುವಲ್ಲಿ ಬೆಂಬಲ ನೀಡುವುದು

- ರಾಜ್ಯ ಸರ್ಕಾರದ ನೀತಿಗಳು ಗ್ರಾಮಪಂಚಾಯತ್‌ಗಳ ಮೇಲೆ ಬೀರುವ ಪರಿಣಾಮಗಳನ್ನು ವಿಶ್ಲೇಷಿಸುವುದು ಮತ್ತು ಸುಗ್ರಾಮ ಕರ್ನಾಟಕದ ಸದಸ್ಯರುಗಳ ಹಿತಾಸಕ್ತಿಗನುಗುಣವಾಗಿ ವಕಾಲತ್ತನ್ನು ನಡೆಸುವುದು
- ಸುಗ್ರಾಮ ಕರ್ನಾಟಕದ ಸದಸ್ಯರಿಗೆ ಪಂಚಾಯತ್ ರಾಜ್ ಸಂಸ್ಥೆ ಕುರಿತಂತೆ ಸೂಚನೆ ಮತ್ತು ಮಾಹಿತಿಗಳನ್ನು ಪ್ರಸರಿಸುವುದು
- ಸಾಮಾಜಿಕ ಸಮಸ್ಯೆ ಮತ್ತು ಲಿಂಗತ್ವ ಅಸಮಾನತೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವುದು

## ಸುಗ್ರಾಮಕ್ಕೆ ಸದಸ್ಯರಾಗುವುದು ಹೇಗೆ?

- ಕರ್ನಾಟಕದಲ್ಲಿನ ಯಾವುದೇ ಗ್ರಾಮ ಪಂಚಾಯತ್‌ನ ಹಾಲಿ (2015–2020) ಚುನಾಯಿತ ಮಹಿಳಾ ಪ್ರತಿನಿಧಿಗಳು ರೂ. 100 ಅನ್ನು ಪಾವತಿಸಿ, ಸುಗ್ರಾಮದ ಸದಸ್ಯರಾಗಬಹುದು. ಸದಸ್ಯತ್ವವನ್ನು ಪ್ರತಿ ವರ್ಷ ನವೀಕರಿಸಿಕೊಳ್ಳಬೇಕು.

- ನೀವು ಈ ಹಿಂದೆ 2010–2015ರ ಗ್ರಾಮ ಪಂಚಾಯತ್ ಚುನಾವಣೆಯ ಅವಧಿಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳಾಗಿದ್ದಲ್ಲಿ (ಈಗ ಮಾಜಿ ಸದಸ್ಯರು), ನೀವು ಕೂಡ ಸುಗ್ರಾಮಕ್ಕೆ ಸದಸ್ಯರಾಗಬಹುದು.

## ಆಡಳಿತ ವಿನ್ಯಾಸ – ಸುಗ್ರಾಮ ಹೇಗೆ ಕೆಲಸ ಮಾಡುತ್ತದೆ?

ಸುಗ್ರಾಮದ ತಳಪಾಯವೇ ತಾಲ್ಲೂಕು ಸುಗ್ರಾಮ ಸಂಘ. ಈ ಸಂಘಟನೆಯನ್ನು ಕರ್ನಾಟಕದ ಆಯ್ದ 13 ಜಿಲ್ಲೆಗಳ 27 ತಾಲ್ಲೂಕುಗಳಲ್ಲಿ ರಚಿಸಲ್ಪಡಲಾಗುತ್ತದೆ.




## ತಾಲ್ಲೂಕು ಮತ್ತು ರಾಜ್ಯ ಸುಗ್ರಾಮ – ಹೇಗೆ ಕಾರ್ಯನಿರ್ವಹಿಸುತ್ತದೆ?

ತಾಲ್ಲೂಕು ಮಟ್ಟದ ಸುಗ್ರಾಮವು ಆಯ್ದ ಪಂಚಾಯತಿಗಳಿಂದ ಬಂದಂತಹ ಸಾರ್ವತ್ರಿಕ ಸಮಸ್ಯೆಗಳು ಮತ್ತು ಕಾಳಜಿಗಳನ್ನು ಕ್ರೂಢೀಕರಿಸಿ, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸುವುದು.

ಒಂದು ವೇಳೆ, ಮೇಲ್ಮಟ್ಟದ ಅಧಿಕಾರಿಗಳ ಮಧ್ಯಸ್ತಿಕೆಯ ಅವಶ್ಯಕತೆಯಿದ್ದಲ್ಲಿ (ಜಿಲ್ಲಾ ಮತ್ತು ರಾಜ್ಯ), ಸುಗ್ರಾಮದ ರಾಜ್ಯ ಮಟ್ಟದ ಸಭೆಗೆ ಮಂಡಸಿ, ವಕಾಲತ್ತು ಮಾಡುವುದು.

ಪ್ರತಿ ಸದಸ್ಯರಿಂದ ಬಂದಂತಹ ಸದಸ್ಯತ್ವ ಶುಲ್ಕವನ್ನು ಆಯಾ ತಾಲ್ಲೂಕಿನ ಸುಗ್ರಾಮದ ಬ್ಯಾಂಕ್ ಖಾತೆಯಲ್ಲಿ ಜಮಾ ಮಾಡುವುದು ಮತ್ತು ಶೇಕಡಾ 50 ರಷ್ಟನ್ನು ರಾಜ್ಯ ಸುಗ್ರಾಮಕ್ಕೆ ನೀಡುವುದು. ಈ ರೀತಿ ಬಂದಂತಹ ಸದಸ್ಯತ್ವ ಶುಲ್ಕವನ್ನು ಸಂಘದ ವಕಾಲತ್ತು ಮತ್ತು ಅನುಸರಣೆಗೆ ಬಳಸಿಕೊಳ್ಳುವುದು.

## ತಾಲ್ಲೂಕು ಮಟ್ಟದ ಪದಾಧಿಕಾರಿಗಳ ಆಯ್ಕೆ:

ಪ್ರತಿಗ್ರಾಮ ಪಂಚಾಯತಿ ಸದಸ್ಯರು ಸುಗ್ರಾಮದ ಸದಸ್ಯತ್ವಕ್ಕೆ ಅರ್ಹರಾಗಿದ್ದು, ಸುಗ್ರಾಮದ ತಾಲ್ಲೂಕು ಚುನಾವಣೆಯಲ್ಲಿ ಪಾಲ್ಗೊಳ್ಳಬಹುದು. ಸುಗ್ರಾಮದ ತಾಲ್ಲೂಕು ಸಂಘದಲ್ಲಿ 7 ಪದಾಧಿಕಾರಿಗಳಿದ್ದು, ತಾಲ್ಲೂಕು ಸಂಘದ ಅಧ್ಯಕ್ಷರು ಸುಗ್ರಾಮದ ಸರ್ವ ಸದಸ್ಯರ ಮಂಡಳಿಯಲ್ಲಿ ಸ್ಥಾನವನ್ನು ಪಡೆಯುತ್ತಾರೆ. ಈ ಕಾರ್ಯಕಾರಿ ಸಮಿತಿಯಲ್ಲಿಒಟ್ಟು 7 ಸದಸ್ಯರಿದ್ದು ಇವರಲ್ಲಿ 1 ಅಧ್ಯಕ್ಷರು, 1 ಉಪಾಧ್ಯಕ್ಷರು, 1 ಕಾರ್ಯದರ್ಶಿ ಮತ್ತು 3 ಇತರೆ ಸದಸ್ಯರಿರುತ್ತಾರೆ. ಕಾರ್ಯಕಾರಿ ಸಮಿತಿಯಲ್ಲಿ ಒಂದು ಗ್ರಾಮಪಂಚಾಯತ್‌ನಿಂದ ಒಂದಕ್ಕಿಂತ ಹೆಚ್ಚು ಚುನಾಯಿತ ಮಹಿಳಾ ಪ್ರತಿನಿಧಿಗಳಿರತಕ್ಕದ್ದಲ್ಲ. ಕಾರ್ಯಕಾರಿ ಸಮಿತಿಯ ಅವಧಿಯು 5 ವರ್ಷವಿರುವುದು. ಕಾರ್ಯಕಾರಿ ಸಮಿತಿಯ ಸದಸ್ಯರು ಸುಗ್ರಾಮದ ಪ್ರತಿ ಸಭೆಗೆ ಹಾಜರಿದ್ದು, ಸುಗ್ರಾಮದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು. ಯಾವ ಸದಸ್ಯೆಯು ಸುಗ್ರಾಮದ ಸಭೆಗೆ ಮೂರು ಬಾರಿ ಅನುಪಸ್ಥಿತರಾಗುವರೋ, ಅವರನ್ನು ಎಲ್ಲಾ ಸದಸ್ಯರ ಸಮ್ಮತಿಯ ಮೇರೆಗೆ, ಒಂದು ಠರಾವಿನ ಮೂಲಕ, ಕಾರ್ಯಕಾರಿ ಸಮಿತಿಯಿಂದ ತೆಗೆದುಹಾಕಬಹುದು ಮತ್ತು ಖಾಲಿಯಾದ ಪದಾಧಿಕಾರಿ ಸ್ಥಾನವನ್ನು, ಎಲ್ಲಾ ಸದಸ್ಯರಅನುಮತಿಯಂತೆ, ನಾಮ ನಿರ್ದೇಶನ ಮಾಡಲಾಗುವುದು. ಇದಲ್ಲದೇ, ಯಾವೊಬ್ಬ ಸದಸ್ಯೆಯು ತನ್ನ ಸದಸ್ಯತ್ವ ಶುಲ್ಕವನ್ನು ನವೀಕರಣ ಮಾಡದಿದ್ದಲ್ಲಿ, ಅವರು ಸುಗ್ರಾಮದ ಸದಸ್ಯತ್ವಕ್ಕೆ ಅರ್ಹರಿರುವುದಿಲ್ಲ.